38

## ಹಾಸನ ಜಿಲ್ಲಾ ದಂಡಾಧಿಕಾರಿಗಳ ನಡವಳಿಗಳು , ಹಾಸನ ಜಿಲ್ಲೆ, ಹಾಸನ.

ವಿಷಯ : ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಸಂಚರಿಸುವ ವಾಹನಗಳ ಭಾರದ ಮಿತಿಯನ್ನು ನಿಗದಿ ಪಡಿಸುವ ಕುರಿತು.

ಓದಲಾಗಿದೆ : ಕರ್ನಾಟಕ ಸರ್ಕಾರದ ಆದೇಶ ಭಾಗ IV- 2C - 1 ಪ್ರಕಟಣೆ ಸಂಖ್ಯೆ ಹೆಚ್.ಡಿ. /55/ಟಿಎಂಆರ್/75 ದಿ. 30.9.82.

ಪ್ರಸ್ತಾವನೆ :

ಸರ್ಕಾರದ ಪ್ರಕಟಣೆ ಸಂಖ್ಯೆ ಭಾಗ 4 - 2ಸಿ -1 ಹೆಚ್ ಡಿ 55 /ಟಿಎಂಆರ್. 75 ದಿ. 30.9.82 ರಲ್ಲಿ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಸಂಚರಿಸುವ ವಾಹನಗಳ ಭಾರದ ಮಿತಿಯನ್ನು ನಿಗದಿಪಡಿಸಲಾಗಿದೆ. ಆದರೆ ಹಾಸನ ಜಿಲ್ಲೆಯ ರಾಜ್ಯ ಮತ್ತು ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಅತಿ ಭಾರದ ವಾಹನಗಳು ಸಂಚರಿಸುತ್ತಿದ್ದು, ಇದರಿಂದಾಗಿ ಸೇತುವೆಗಳು, ಮೋರಿಗಳು ಹಾಗೂ ರಸ್ತೆಗಳು ಅಧಿಕ ಭಾರದಿಂದಾಗಿ ಹಾಳಾಗುತ್ತಿರುತ್ತವೆ. ಆದುದರಿಂದ ಅಧಿಕ ಭಾರದ ವಾಹನಗಳನ್ನು ನಿಯಂತ್ರಿಸುವುದು ಅತಿ ಅವಶ್ಯವೆಂದು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ , ಹಾಸನ ರವರು ಅವರ ಪತ್ರದ ಸಂ. ಕಾಇಂ.ಹಾವಿ.ಹಾಸನ. ಸಇಂ.1 / 2004-05 ದಿ. 25.10.04 ರಂದು ಅಭಿಪ್ರಾಯಿಸಿರುತ್ತಾರೆ. ಈ ಬಗ್ಗೆ ದಿ. 21.10.04 ರಂದು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಡೆದ ಸಭೆಯಲ್ಲಿ ಸವಿವರವಾಗಿ ಚರ್ಚಿಸಲಾಗಿದ್ದು , ಅಧಿಕ ಭಾರದ ವಾಹನಗಳನ್ನು ನಿಯಂತ್ರಿಸುವುದು ಅತಿ ಅವಶ್ಯಕವೆಂದು ತೀರ್ಮಾನಿಸಲಾಗಿರುತ್ತದೆ. ಅಲ್ಲದೆ ಕಾರ್ಯಪಾಲಕ ಅಭಿಯಂತರರು , ಲೋಕೋಪಯೋಗಿ ಇಲಾಖೆ, ಹಾಸನ ರವರ ವರದಿಯನ್ನು ಸಹಾ ಪರಿಶೀಲಿಸಲಾಗಿದ್ದು, ಅವರ ವರದಿಯು ಸಮಂಜಸವೆಂದು ನಾನು ಅಭಿಪ್ರಾಯಿಸಿರುವುದರಿಂದ, ಈ ಹಿನ್ನಲೆಯಲ್ಲಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಆದೇಶ ಸಂ. ನ್ಯಾಂಯಾಂಗ. 585/2004-05 ದಿನಾಂಕ. 26.10.2004.**

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ ಕೆ.ಹೆಚ್. ಅಶ್ವತ್ಥನಾರಾಯಣ ಗೌಡ, ಐ.ಎ.ಎಸ್., ಜಿಲ್ಲಾ ದಂಡಾಧಿಕಾರಿ, ಹಾಸನ ಜಿಲ್ಲೆ, ಹಾಸನ ಆದ-ನಾನು 1988 ರ ಕೇಂದ್ರ ಮೋಟಾರು ವಾಹನ ಕಾಯ್ದೆ ವಿಧಿ 115 ಸಹವಚನ ಕರ್ನಾಟಕ ಮೋಟಾರುವಾಹನ ನಿಯಮ 1989 ರ 221 ಎ (5) ರನ್ವಯ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ , ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಸಂಚರಿಸುವ ಎಲ್ಲಾ ತರದ ವಾಹನಗಳ ಭಾರದ ಮಿತಿಯನ್ನು ಈ ಕೆಳಕಂಡಂತೆ ನಿಗದಿಪಡಿಸಿ ಆದೇಶಿಸಿದೆ.

| | | | |
|---|---|---|---|
| 1 | ರಾಜ್ಯ ಹೆದ್ದಾರಿ | 2 ಆಕ್ಸಲ್ | 12 ಮೆಟ್ರಿಕ್ ಟನ್ |
| | | 4 ಆಕ್ಸಲ್ | 20 ಮೆಟ್ರಿಕ್ ಟನ್ |
| 2 | ಜಿಲ್ಲಾ ಮುಖ್ಯ ರಸ್ತೆ | 2 ಆಕ್ಸಲ್ | 10 ಮೆಟ್ರಿಕ್ ಟನ್ |
| | | 4 ಆಕ್ಸಲ್ | 15 ಮೆಟ್ರಿಕ್ ಟನ್ |

MDG 29/10 10747

ಮೇಲ್ಕಂಡ ಭಾರಕ್ಕಿಂತ ಹೆಚ್ಚು ಭಾರ ಸಾಗಿಸುವ ವಾಹನಗಳ ವಿರುದ್ಧ ಚಾಲ್ತಿಯಲ್ಲಿರುವ ಕಾನೂನಿನ್ವಯ ಕಠಿಣ ಕ್ರಮ ಕೈಗೊಳ್ಳಲು ಜಿಲ್ಲೆಯ ಆರಕ್ಷಕ ಇಲಾಖೆಗೆ ನಿರ್ದೇಶಿಸಿದೆ.

ಈ ಆದೇಶವನ್ನು ದಿನಾಂಕ : 26.10.2004 ರಂದು ನನ್ನ ಸಹಿ ಹಾಗೂ ಕಛೇರಿ ಮುದ್ರೆಯೊಂದಿಗೆ ಹೊರಡಿಸಲಾಗಿದೆ.

(ಕೆ.ಹೆಚ್. ಅಶ್ವತ್ಥನಾರಾಯಣ ಗೌಡ)
ಜಿಲ್ಲಾ ದಂಡಾಧಿಕಾರಿ,
ಹಾಸನ ಜಿಲ್ಲೆ, ಹಾಸನ.

ಪ್ರತಿ :

1. ಜಿಲ್ಲಾ ಆರಕ್ಷಕ ಅಧೀಕ್ಷಕರು/ಅಪರ ಆರಕ್ಷಕ ಅಧೀಕ್ಷಕರು, ಹಾಸನ ಜಿಲ್ಲೆ, ಹಾಸನ ರವರಿಗೆ ಸೂಕ್ತ ಕ್ರಮಕ್ಕಾಗಿ.
2. ಉಪವಿಭಾಗಾಧಿಕಾರಿಗಳು, ಹಾಸನ/ಸಕಲೇಶಪುರ ರವರಿಗೆ ಮಾಹಿತಿಗಾಗಿ.
3. ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಹಾಸನ ರವರಿಗೆ ಮಾಹಿತಿಗಾಗಿ ಹಾಗೂ ಆಗತ್ಯ ಕ್ರಮಕ್ಕಾಗಿ.
4. ಉಪ ಆರಕ್ಷಕ ಅಧೀಕ್ಷಕರು, ಹಾಸನ/ಹೊಳೆನರಸೀಪುರ/ಅರಸೀಕೆರೆ ರವರಿಗೆ ಸೂಕ್ತ ಕ್ರಮಕ್ಕಾಗಿ.
5. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಹಾಸನ ಜಿಲ್ಲೆ, ಹಾಸನ ಹಾಗೂ ಮಂಗಳೂರು ದಕ್ಷಿಣ ಕನ್ನಡ ಜಿಲ್ಲೆ ರವರಿಗೆ ಆಗತ್ಯ ಕ್ರಮಕ್ಕಾಗಿ.
6. ಜಿಲ್ಲೆಯ ಎಲ್ಲಾ ತಹಸೀಲ್ದಾರ್‌ರಿಗೆ.
7. ಸಹಾಯಕ ನಿರ್ದೇಶಕರು, ಸರ್ಕಾರಿ ಮುದ್ರಣಾಲಯ, ಸರಸ್ವತಿ ಪುರಂ, ಮೈಸೂರು ರವರಿಗೆ ಕಳುಹಿಸುತ್ತಾ, ಸದರಿ ನಡವಳಿಕೆಯನ್ನು ವಿಶೇಷ ಗೆಜೆಟ್‌ನಲ್ಲಿ ಪ್ರಕಟಿಸಿ, 25 ಪ್ರತಿಗಳನ್ನು ಈ ಕಛೇರಿಗೆ ಕಳುಹಿಸಲು ಕೋರಿದೆ.

Mala ir Tues